ಸಿ. ಸಿ. ನಂ.- **252/2021**

ಡಿ. ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **12-09-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ದೂರುದಾರರ ಪರ ಶ್ರೀ ಎಸ್ ಅರ್ ಎಸ್ ಜೆ ವಕೀಲರಿಂದ -

ನನ್ನ ಮುಖ್ಯ ವಿಚಾರಣೆಯಲ್ಲಿ ಹಣವನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳಿದ ಮೊತ್ತವನ್ನು ಹೊರತುಪಡಿಸಿ ಬೇರೆ ಎಷ್ಟು ಮೊತ್ತವನ್ನು ಪಿರ್ಯಾಧಿರರಿಂದ ಪಡೆದುಕೊಂಡಿರುತ್ತೇನೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. **2008** ರಿಂದ **2016** ನೇ ಇಸ್ವಿಯವರೆಗೆ ನನ್ನ ಹಾಗೂ ಪಿರ್ಯಾಧಿ ನಡುವೆ ಸುಮಾರು **200** ರಿಂದ **300** ವ್ಯವಹಾರಗಳು ನಡೆದಿವೆ ಎಂದರೆ ಸರಿಯಲ್ಲ. ಈ ರೀತಿ ನನ್ನ ಮತ್ತು ಪಿರ್ಯಾಧಿ ನಡುವೆ ಎಷ್ಟು ಬಾರಿ ಈ ಮೇಲೆ ಹೇಳಿದ ಅವಧಿಯಲ್ಲಿ ವ್ಯವಹಾರದ ಅಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಎಷ್ಟು ಟಯರ್ ಗಳನ್ನು ಸ್ವಂತಕ್ಕಾಗಿ ಖರೀದಿ ಮಾಡಿರುತ್ತೇನೆ ಹಾಗೂ ಎಷ್ಟು ಟಯರ್ ಗಳನ್ನು ಬೇರೆಯವರಿಗೆ ಕೊಡಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಸಹ ಟಯರ್ ಖರೀದಿ ಮಾಡಿಲ್ಲ ಹಾಗೂ ಬೇರೆಯವರಿಗೂ ಸಹ ಕೊಡಿಸಿಲ್ಲ ಎಂದು ನುಡಿಯುತ್ತಾರೆ. ಸ್ವಂತಕ್ಕೆ ಎಷ್ಟು ಸಾಲವನ್ನು ಪಿರ್ಯಾಧಿದಾರರಿಂದ ಪಡೆದಿರುತ್ತೇನೆ ಹಾಗೂ ಬೇರೆಯವರಿಗೆ ಎಷ್ಟು ಸಾಲವನ್ನು ಪಿರ್ಯಾಧಿರರಿಂದ ಕೊಡಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಸಹ ಸಾಲ ಪಡೆದಿಲ್ಲ ಬೇರೆಯವರಿಗೂ ಸಹ ಕೊಡಿಸಿಲ್ಲ ಎಂದು ನುಡಿಯುತ್ತಾರೆ. ಮಜ್ಜಗಿ ನಾಗರಾಜ, ಸುರೇಶ ಮಜ್ಜಗಿ, ಮಾರುತಿ ಮಜ್ಜಗಿ, ರವಿ ಮಜ್ಜಗಿ ಹಾಗೂ ಶೇಷಪ್ಪಾ ಮಜ್ಜಗಿ ಯವರು ಒಂದೇ ಕುಟುಂಬದವರು ಎಂದರೆ ಸರಿ. ಈ ರೀತಿ ಮಜ್ಜಗಿ ಕುಟುಂಬದವರಿಗೆ ಹಾಗೂ ನನ್ನ ಬಳಿ ನಡೆಯುತ್ತಿರುವ ಬ್ಯಾಂಡ್ ಲೂಸರ್ಸ್ ಗಾಡಿಗಳಿಗೆ ಹಾಗೂ ನನ್ನ ಸ್ವಂತ ಗಾಡಿಗಳಿಗೆ ಪಿರ್ಯಾಧಿದಾರರಿಂದ ಟಯರ್ ಖರೀದಿ ಮಾಡಿ ಕೊಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2016** ನೇ ಇಸ್ವಿಯಲ್ಲಿ ನನ್ನ ಬಳಿ **12** ಗಾಡಿಗಳು ಇದ್ದವು. ದೂರುದಾರರ ಮುಖಾಂತರ ಬೇರೆ ಕಂಪನಿಗಳಿಂದ ಖರೀದಿ ಮಾಡಿದ ಟಯರ್ ಗಳಿಗೆ ವಾಪಸ್ಸು ನೇರವಾಗಿ ಆ ಕಂಪನಿಯವರಿಗೆ ಹಣ ಪಾವತಿ ಮಾಡಿರುತ್ತೇನೆ ಎಂದು ನನ್ನ ಹಿಂದಿನ ಪಾಟೀ ಸವಾಲಿನಲ್ಲಿ ಹೇಳಿದ್ದು, ಅದಕ್ಕೆ ಸಂಬಂದಪಟ್ಟ ದಾಖಲೆಗಳು ಇವೇಯೆ ಎಂದರೆ ಸಾಕ್ಷಿ ಆ ನಿಖರವಾದ ವರ್ಷದಲ್ಲಿ ಆಡಿಟ್

ಆಗಿರುತ್ತದೆ ಹಾಗೂ ಅದಕ್ಕೆ ಸಂಬಂಪಟ್ಟ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದೇ ಎಂದರೆ ಸಾಕ್ಷಿ ನಾನು ಆಡಿಟರ್ ಬಳಿ ಕೇಳುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾರಿಗೆ ಡಿಸೈಲ್ ಕೊಡಿಸಿರುತ್ತೇನೆ, ಯಾರಿಗೆ ಟ್ರಾನ್ಸಪೊರ್ಟ್ ಮಾಡಿರುತ್ತೇನೆ, ಯಾವ ವಾಹನದ ಮುಖಾಂತರ ಟ್ರಾನ್ಸಪೊರ್ಟ್ ಅಗಿದೆ, ಅವರಿಗೆ ಎಷ್ಟು ಟಯರ್ ಗಳನ್ನು ಕೊಡಿಸಿದ್ದೆ, ವಾಹನದ ಮಾಲೀಕರಿಗೆ ಎಷ್ಟು ಮುಂಗಡ ಹಣ ಕೊಟ್ಟಿದ್ದೆ, ವಾಹನದ ಮಾಲೀಕರಿಗೆ ಎಷ್ಟು ಟ್ರಾನ್ಸಪೊರ್ಟ್ ಹಣ ಕೊಟ್ಟಿದ್ದೇನೆ, ಅವರಿಂದ ಡಿಸೈಲ್ ಹಾಗೂ ಟಯರ್ ನ ಎಷ್ಟು ಮೊತ್ತವನ್ನು ಡಿಡ್ಕಟ್ ಮಾಡಿರುತ್ತೇನೆ ಎಂಬ ಬಗ್ಗೆ ನಾನು ಕಡತಗಳನ್ನು ಮೇನ್‌ಟೆನ್ ಮಾಡುವುದಿಲ್ಲ ಬೇರೆಯವರು ಮಾಡುತ್ತಾರೆ. ನನ್ನ ಮಗ ಈ ಬಗ್ಗೆ ಕಡತಗಳನ್ನು ಮೇನ್‌ಟೆನ್ ಮಾಡಿರುತ್ತಾರೆ. ಪ್ರತಿ ತಿಂಗಳ 15 ನೇ ತಾರೀಖಿನಂದು ಕೊಡಬೇಕಾದ ಹಣವನ್ನು ಸಂಬಂದಪಟ್ಟವರಿಗೆ ಕೊಟ್ಟುಬಿಡುತ್ತೇವೆ.

ಸಾಕ್ಷಿಗೆ ಚೆಕ್ ನಂಃ 288709 ಇದರ ಎರಡು ದೃಡೀಕೃತ ನಕಲುಗಳನ್ನು ಎದುರು ತೋರಿಸಿದಾಗ ಸಾಕ್ಷಿ ಅದು ತಮ್ಮ ಚೆಕ್ ಎಂದು ಒಪ್ಪಿದ ಕಾರಣ ಅವುಗಳನ್ನು ಅನುಕ್ರಮವಾಗಿ ನಿಪಿ14 ಮತ್ತು 15 ಎಂದು ಗುರುತಿಸಲಾಯಿತು. ಸದರಿ ಎರಡು ಚೆಕ್ ಗಳು ಒಂದೇಯಾಗಿದ್ದು ನಿಪಿ14 ನೇ ದಾಖಲೆಯಲ್ಲಿ ಪೇಇ ಹೆಸರು ಅಮರ್ ದೀಪ ಕೌರ್ ಎಂದು ನಮೂದು ಆಗಿದ್ದು, ನಿಪಿ 15 ರಲ್ಲಿ ದೂರುದಾರರ ಹೆಸರು ಇರುತ್ತದೆ, ಹೀಗಿರುವ ಕಾರಣ, ನಿಪಿ 14 ರಲ್ಲಿರುವ ದೂರುದಾರರ ಹೆಂಡತಿಯ ಹೆಸರನ್ನು ದುರೂಪಯೋಗ ಪಡೆಸಿಕೊಂಡು, ದೂರುದಾರರು ತಮ್ಮ ಹೆಂಡತಿಯ ಮುಖಾಂತರ ನನ್ನ ಖಾತಾ ವಿವರದಲ್ಲಿ ದೂರುದಾರರ ಹೆಂಡತಿಗೆ ಕೇಲವೊಂದು ಮೊತ್ತ ಪಾವತಿ ಆಗಿದೆ ಎಂದು ನಮೂದು ಆಗಿರುವ ವ್ಯವಹಾರಗಳ ದುರೂಪಯೋಗ ಪಡೆಸಿಕೊಂಡು ದೂರುದಾರರು ತಮ್ಮ ಹೆಂಡತಿಯ ಮುಖಾಂತರ ಹಣವನ್ನು ನನ್ನಿಂದ ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ನಿಪಿ 14 ರಲ್ಲಿ ತಪ್ಪಾಗಿ ನಮೂದು ಆದ ಅವರ ದೀಪ್ ಕೌರ ಹೆಸರನ್ನು ದುರೂಪಯೋಗ ಪಡೆಸಿಕೊಂಡು ನನ್ನ ಖಾತಾ ವಿವರದಲ್ಲಿ ತಪ್ಪಾಗಿ ಅಮರ ದೀಪ ಕೌರ ಎಂದು ನಮೂದು ಆದ ಹೆಸರನ್ನು ದುರೂಪಯೋಗ ಪಡೆಸಿಕೊಂಡರು

ದೂರುದಾರರು ತಮ್ಮ ಹೆಂಡತಿಯ ಮುಖಾಂತರ ನನ್ನಿಂದ ಹಣ ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಚೆಕ್ ನಂಃ 004963 ನೇದ್ದರ ದೃಡೀಕೃತ ನಕಲನ್ನು ಎದುರು ತೋರಿಸಿ ಇದು ನಿಮ್ಮದೇ ಚೆಕ್ ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ ಆದ್ದರಿಂದ ಸದರಿ ದಾಖಲೆಯನ್ನು ನಿಪಿ 16 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಕಾಣುವ ಚೆಕ್ ನಲ್ಲಿ ದೂರುದಾರರ ಹೆಸರು ಬರೆದಿದ್ದರು ಸಹ ಪೇಇ ಹೆಸರನ್ನು ಅಮರ ದೀಪ ಕೌರ ಎಂದು ಬ್ಯಾಂಕ್ ನವರ ತಪ್ಪಿನಿಂದ ನಮೂದು ಆಗಿದೆ ಎಂದರೆ ಸಾಕ್ಷಿ ಅದು ಬ್ಯಾಂಕಿನವರಿಗೆ ಗೊತ್ತು ಹಾಗೂ ನಿಮಗೆ ಗೊತ್ತು ನೀವು ಯಾರ ಹೆಸರಿನಲ್ಲಿ ಈ ಚೆಕ್ ನ್ನು ಬ್ಯಾಂಕ್ ನಲ್ಲಿ ಹೂಡಿರುತ್ತೀರಿ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 16 ರಲ್ಲಿ ಕಾಣುವ ಚೆಕ್ ನಲ್ಲಿರುವ ಬರವಣಿಗೆ ನನ್ನದಲ್ಲ.

ಸಾಕ್ಷಿಗೆ 5 ಸೂಕೋ ಬ್ಯಾಂಕ್ ನವರು ನೀಡಿದ ಪೇಇನ್ ಸ್ಲೀಪ್ ಎದುರು ತೋರಿಸಿ ಅವುಗಳು ಸಾಕ್ಷಿಯ ಚೆಕ್‌ಗಳಿಗೆ ಸಂಬಂದಪಟ್ಟಿದ್ದು ಎಂದರೆ ಸಾಕ್ಷಿ ಅದನ್ನು ಒಪ್ಪಿರುವುದಿಲ್ಲ. ಆದ್ದರಿಂದ ಮಾನ್ಯ ನ್ಯಾಯಾಲಯದ ಗಣನೆಗೆ ತೆಗೆದುಕೊಳ್ಳಲು ಸದರಿ ದಾಖಲೆಗಳನ್ನು ಮೆಮೋ ಮುಖಾಂತರ ನ್ಯಾಯಾಲಯದ ಕಡತಕ್ಕೆ ಸಲ್ಲಿಸಲು ದೂರುದಾರರಿಗೆ ಸೂಚಿಸಲಾಗಿದೆ.

ಸಾಕ್ಷಿಗೆ ಮತ್ತೊಮ್ಮೆ ಸದರಿ ದಾಖಲೆಯನ್ನು ತೋರಿಸಿ ಅದರಲ್ಲಿ 004963 ಎಂಬ ಚೆಕ್ ನ ನಂಬರ ನಿಮ್ಮ ಚೆಕ್ ಗೆ ಸೇರಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಮಾಡಿದ ಪಾಟೀ ಸವಾಲಿನಲ್ಲಿ ಕೆಲವು ಸೇಲ್ಫ ಚೆಕ್ ಗಳನ್ನು ನನ್ನ ಮಗ ಬ್ಯಾಂಕ್ ನಲ್ಲಿ ಹೂಡಿ ಹಣ ಬಿಡಿಸಿಕೊಂಡಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ಮಗನ ಹೆಸರು ಸಮೀರ್ ಸೌದಾಗರ್ ಆಗಿರುತ್ತದೆ. ಅದೇ ರೀತಿ ಲ್ಯಾಂಡ್ ಲೂಸುರ್ಸ್ ಗೆ ಸೇಲ್ಫ ಚೆಕ್ ಮುಖಾಂತರ ಹಣ ಕೊಡುತ್ತಿದ್ದೆ ಎಂದು ಈ ಹಿಂದೆ ಪಾಟೀ ಸವಾಲಿನಲ್ಲಿ ಹೇಳಿರುತ್ತೇನೆ ಎಂದರೆ ಸಾಕ್ಷಿ ಸೇಲ್ಫ ಚೆಕ್ ಮುಖಾಂತರ ನಾವು ಹಣ ಬಿಡಿಸಿಕೊಂಡು ಲ್ಯಾಂಡ್ ಲೂಸರ್ಸ್ ಗೆ ನಾವು ನಗದು ಕೊಡತ್ತಿದ್ದೆವು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಮುಂದೆ ಸಲ್ಲಿಸಿದ ನನ್ನ ಖಾತಾ ವಿವರದಲ್ಲಿ ಸಮೀರ್ ಸೌದಾಗರ ರವರ ಹೆಸರು ಕಾಣುವುದಿಲ್ಲ ಎಂದರೆ ಸಾಕ್ಷಿ ನನ್ನ ಹಾಗೂ ದೂರುದಾರರ ನಡುವೆ ವ್ಯವಹಾರ ಆಗುತ್ತಿದ್ದ ಸಮಯದಲ್ಲಿ ನನ್ನ ಮಗ ಇನ್ನೂ ಕೆಲಸ ಮಾಡುತ್ತಿರಲಿಲ್ಲ ಆದ್ದರಿಂದ ಅವನ ಹೆಸರು ಇಲ್ಲ ಎಂದು ನುಡಿಯುತ್ತಾರೆ. ಚೆಕ್ ಬುಕ್‌ನ ಲೀಫ್‌ನಲ್ಲಿ ಯಾರಿಗೆ ಚೆಕ್‌ನ್ನು

ಕೊಡುತ್ತೇವೆ ಎಂದು ವಿವರ ನಮೂದು ಮಾಡಲು ಒಂದು ಜಾಗ ಇದೆ ಎಂದರೆ ಸರಿ. ಅದರಲ್ಲಿ ಯಾರಿಗೆ ಚೆಕ್ ಗಳನ್ನು ಕೊಟ್ಟಿರುತ್ತೇನೆ ಎಂಬ ಬಗ್ಗೆ ಬರೆಯತ್ತೇನೆ ಎಂದರೆ ಸಾಕ್ಷಿ ನಾನು ಸೇಲ್ಫ ಚೆಕ್ ಮುಖಾಂತರ ಹಣ ಬಿಡಿಸಿಕೊಳ್ಳುವುದರಿಂದ ಅದರ ಬಗ್ಗೆ ನಮೂದು ಮಾಡುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ದೂರುದಾರರು ನನ್ನ ವಿರುದ್ಧ ಸಲ್ಲಿಸಿದ 12 ಕೇಸ್ ಗಳಲ್ಲಿ ಇರುವ ಚೆಕ್ ಗಳ ಕೌಂಟರ್ ಫೈಲ್ ನನ್ನ ಬಳಿ ಇಲ್ಲ.

ನಾನು ಕೊನೆಯ ಬಾರಿ ಗೋವಾಗೆ ಯಾವಾಗ ಹೋಗಿ ಬಂದಿದ್ದೆ ಎಂದು ನಿಖರವಾಗಿ ಗೊತ್ತಿಲ್ಲ. ಗೋವಾದಿಂದ ಬಂದು ಎಷ್ಟು ದಿನಗಳು ಆಗಿವೆ ಎಂದರೆ ಸಾಕ್ಷಿ ಅಂದಾಜು 3 ವರ್ಷಗಳು ಆಗಿವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಗೋವಾದಲ್ಲಿ ಇದ್ದ ಐರನ್ ಸ್ಪಾಂಜ್ ಫ್ಯಾಕ್ಟರಿ ಮುಚ್ಚಿದಾಗಿನಿಂದ ನಾನು ಅಲ್ಲಿಗೆ ಹೋಗಿಲ್ಲ ಎಂದು ನುಡಿಯುತ್ತಾರೆ. 2022-23 ನೇ ಇಸ್ವಿಯಲ್ಲಿ ಈ ರೀತಿ ಫ್ಯಾಕ್ಟರಿ ಮುಚ್ಚಲಾಗಿದೆ. ನನ್ನ ಚೆಕ್‌ನ್ನು ದೂರುದಾರರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿದ ನಂತರ ನಾನು ಅವರಿಗೆ ನೋಟಿಸ್ ಕೊಟ್ಟಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನನ್ನ ಖಾತಾ ವಿವರದಲ್ಲಿ ದೂರುದಾರರಿಗೆ ಮಾಡಿದ ಪೇಮೆಂಟ್ ಗಳನ್ನು ಹೊರತುಪಡಿಸಿ ಟಯರ್ ಮತ್ತು ಸಾಲವನ್ನು ಕೊಡಿಸಿದಕ್ಕೆ ಹಲವಾರು ಚೆಕ್ ಗಳ ಮುಖಾಂತರ ದೂರುದಾರರು ಹಣವನ್ನು ಪಡೆದಿರುತ್ತಾರೆ ಅದರ ಬಗ್ಗೆ ನನ್ನ ಖಾತೆ ಇರುವ ಬ್ಯಾಂಕ್ ಮರ್ಜ್ ಅಗಿದ್ದರು ಸಹ ಮಾಹಿತಿ ಸಿಗುತ್ತವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಖಾತಾ ವಿವರ ಎಪ್ರೀಲ್ 2009 ರಿಂದ ಅದರ ನಂತರ ಆಗಿರುವ ವ್ಯವಹಾರಗಳಿಗೆ ಸಂಬಂದಪಟ್ಟಿದ್ದು, ಅದಕ್ಕೂ ಮುಂಚೆ ಇರುವ ವ್ಯವಹಾರಗಳಿಗೆ ಸಂಬಂದಪಟ್ಟಿದ್ದು ಅಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿಃ 20.03.2021 ರಂದು ರಾಜೀ ಮುಖಾಂತರ ಜನವರಿ 2008 ರಿಂದ ಮಾರ್ಚ್ 2009 ರವರೆಗಿನ ಮೊತ್ತವಾದ ರೂ. 12,77,800.00 ಕೊಡಲು ಒಪ್ಪಿ ಅದಕ್ಕೆ ಅನಗುಣವಾಗಿ 12 ಚೆಕ್ ನ್ನು ದೂರುದಾರರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾರ್ಪೊರೇಷನ್ ಬ್ಯಾಂಕನಿಂದ ನಾನು ಖಾತೆ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಮೇಲೆ ಹೇಳಿದ ಮೊತ್ತವನ್ನು ದೂರುದಾರರಿಗೆ ಕೊಡಲು ತಪ್ಪಿದ್ದರೆ ರೂ.2 ಬಡ್ಡಿಗೆ ಸದರಿ ಮೊತ್ತದ ಮರುಪಾವತಿ ಮಾಡುತ್ತೇನೆ ಎಂದು ಒಪ್ಪಿದ್ದೆ ಎಂದರೆ ಸರಿಯಲ್ಲ. ಅದರಿಂದ ತಪ್ಪಿಸಿಕೊಳ್ಳಲು ನಾನು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಕುಬಾಳ ಲಕ್ಷ್ಮಣ ಶೆಟ್ಟಿ ಅವರ ವ್ಯವಸ್ಥಾಪಕರು ರಾಘವೆಂದ್ರ ಹಾಗೂ ಗ್ರಾಹಕರಾದ ತೇಜಪಾಲ್ ಜೈನ್ ರವರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಿಪಿ 11 ಹೇಳಿಕೆಯನ್ನು ಪೊಲೀಸ್‌ರಿಗೆ ಕೊಡುವ ಮುನ್ನ ನಾನು ನನ್ನ ವಿರುದ್ದ ದೂರುದಾರರು ದಾಖಲಿಸಿದ 12 ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಪಡೆದ ನೋಟಿಸ್ ಗೆ ಪ್ರತ್ಯುತ್ತರ ಕೊಟ್ಟು ಸದರಿ ಪ್ರಕರಣಗಳಲ್ಲಿ ಹಾಜರಾಗಿದ್ದೆ ಎಂದರೆ ಸಾಕ್ಷಿ ನಾನು ನಿರೀಕ್ಷಣಾ ಜಾಮೀನು ಮಾತ್ರ ಪಡೆದಿದ್ದೆ ಬೇರೆ ಯಾವುದೇ ಪ್ರತ್ಯುತ್ತರ ಕೊಟ್ಟಿಲ್ಲ ಹಾಗೂ ಯಾವುದೇ ಪ್ರಕರಣಗಳಲ್ಲಿ ಹಾಜರಾಗಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ 12 ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದೆ ಎಂದರೆ ಸರಿ. 2017 ನೇ ಇಸ್ವಿಯಿಂದ ಸಮೀರ್ ಸೌದಾಗರ್ ರವರು ನನ್ನ ಜೊತೆ ಕೆಲಸ ಮಾಡುತ್ತಿದ್ದಾರೆ. ಅದಕ್ಕೂ ಮುನ್ನ ಲೆಕ್ಕ ಪತ್ರಗಳನ್ನು ನಾನು ನಿಭಾಯಿಸುತ್ತಿದ್ದೆ. ಸದರಿ ಲೆಕ್ಕ ಪುಸ್ತಕಗಳು ನನ್ನ ಬಳಿ ಇವೆ ಎಂದರೆ ಸಾಕ್ಷಿ ಅವು ಅಡಿಟರ್ ಬಳಿ ಇವೆ ಎಂದು ನುಡಿಯುತ್ತಾರೆ. ಈ ರೀತಿ ಆಡಿಟ್ ಮಾಡಿದ ನಂತರ ಆಡಿಟರ್ ಲೆಕ್ಕ ಪತ್ರಗಳನ್ನು ವಾಪಸ್ಸು ಕೊಡತ್ತಾರೆ ಎಂದರೆ ಸರಿಯಲ್ಲ. ಕಾಕಬಾಳಶೆಟ್ಟಿ, ಅವರ ವ್ಯವಸ್ಥಾಪಕರಾದ ರಾಘವೇಂದ್ರ, ಅವರ ಗ್ರಾಹಕಾರದ ತೇಜಪಾಲ್ ಜೈನ್ ಹಾಗೂ ದೂರುದಾರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಹಾಗೂ ಸದರಿಯವರ ಪರಿಚಯ ನನಗೆ ಇಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.

ಸಿ. ಸಿ. ನಂ.- **252/2021**

ಡಿ. ಡಬ್ಲ್ಯೂ- **1**